ಮತ್ತು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮಾಡುತ್ತಿದ್ದಾರೆ. ಈ ಸರ್ಕಾರದ ನೀತಿ ಏನು ಇದೆ ಅದನ್ನು ನಾವು ಪ್ರೊಟೆಸ್ಟ್ ಮಾಡುತ್ತಿದ್ದೇವೆ. ಈ ಸರ್ಕಾರದ ನೀತಿಯನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರೊಂದಿಗೆ ಬಿ.ಜೆ.ಪಿ. ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೇ ಇದು ಬೇಸ್‌ಲೆಸ್ ಅಲಿಗೇಷನ್. ಅವರು ಸುಮ್ಮನೇ ರಾಜಕೀಯ ಲಾಭ ಪಡೆಯುವುದಕ್ಕೋಸ್ಕರ ಮಾಡುತ್ತಿದ್ದಾರೆ. ಈ ಪೈಲೆಟ್ ಸ್ಕೀಮ್ ಬಗ್ಗೆ ನಾನು ಈ ಸದನದಲ್ಲಿ ಎಲ್ಲವನ್ನೂ ಎಕ್ಸ್‌ಪ್ಲೇನ್ ಮಾಡುತ್ತೇನೆ. ಈಗ 5 ಸಾವಿರ ಜನ ರಿಜಿಸ್ಟರ್ ಮಾಡಿದರೆ 5 ಲಕ್ಷ ರೂ, ಈ 5 ಲಕ್ಷ ರೂ.ನಲ್ಲಿ ಜನರಿಗೆ ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಹಳೆಯ ಸ್ಕೀಮ್ ಪ್ರಕಾರ ಫೋಟೋ ಕೊಡಬೇಕು, ಎಲ್ಲಾ ಮಾಹಿತಿ ಕೊಡಬೇಕು ಮತ್ತೆ ಪ್ರತಿ ವರ್ಷ ಹೋಗಬೇಕು. ನಮ್ಮ ಕನ್ನಡಿಗರಿಗೆ ನಾನು ಈ ಮಾಡರ್ನ್ ಟೆಕ್ನಿಕ್‌ನಲ್ಲಿ ಆ ಎಕ್ಸ್‌ಲೆನ್ಸ್ ಏನು ಇದೆ ಅದನ್ನು ಆ ಕಂಪ್ಯೂಟರ್‌ನಲ್ಲಿ ಕೊಟ್ಟಿಲ್ಲ ಅಂದರೆ ಯಾರಿಗೆ ಕೆಲಸ ಸಿಗುತ್ತದೆ? ಇದು ಕನ್ನಡಿಗರ ಪರವಾಗಿ ನಮ್ಮ ಸರ್ಕಾರ ಮಾಡಿರುವ ಯೋಜನೆ. ಈ ಯೋಜನೆ ಬಹಳ ಮಹತ್ವಾಕಾಂಕ್ಷೆಯಿಂದ ಕೂಡಿದೆ.

(ಗೊಂದಲ)

ಅಧ್ಯಕ್ಷರು : ಸಾಕು ಬಿಡಿ. ಮುಂದಿನ ಪ್ರಶ್ನೆ ಮಾನ್ಯ ಕೌಜಲಗಿಯವರು ಕೇಳಿ. ನಾವು ಮೊದಲಿನಿಂದಲೂ ಪಾಲನೆ ಮಾಡಿಕೊಂಡು ಬಂದಿರುವುದು ಏನೆಂದರೆ ಒಂದು ಗಂಟೆ ವೇಳೆಯಲ್ಲಿ ಸಮಯ ಸಿಕ್ಕಿದರೆ ಆಮೇಲೆ ಅವಕಾಶ ಕೊಡುತ್ತೇವೆ. ಅದು ಪ್ರೊಸೀಜರ್. ಅದನ್ನು ನಾವು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದ್ದೇವೆ. ಈಗ ITI ಕಾಲೇಜು ಜೊತೆಗೆ ITI ಕೇಂದ್ರಗಳಿಗೆ ಸಂಬಂಧ ಪಟ್ಟ ಹಾಗೆ ಎರಡೂ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಒಟ್ಟಿಗೆ ಕೇಳಬಹುದು ಮಾನ್ಯ ಕೌಜಲಗಿಯವರು ಮತ್ತು ಶ್ರೀ ಗೋಪಾಲ ಭಂಡಾರಿಯವರೇ ಪ್ರಶ್ನೆಯನ್ನು ಕೇಳಿ.

ರಾಜ್ಯದಲ್ಲಿ ಹೊಸ ಸರ್ಕಾರಿ ಐ.ಟಿ.ಐ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ

3150 (346) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಎಷ್ಟು ಸರ್ಕಾರಿ ಐ.ಟಿ.ಐ ಕಾಲೇಜುಗಳನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿದೆ;

ಆ) ಸರ್ಕಾರಿ ಕಟ್ಟಡ ಲಭ್ಯವಿರುವಲ್ಲಿ ಆದ್ಯತೆಯ ಮೇರೆಗೆ ಸರ್ಕಾರಿ ಐ.ಟಿ.ಐ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ದೊಡವಾಡ ಗ್ರಾಮದಲ್ಲಿರುವ ಸರ್ಕಾರಿ ವಿಜ್ಞಾನ ಮಹಾವಿದ್ಯಾಲಯ ಬೇರೆ ಕಡೆಗೆ ಸ್ಥಳಾಂತರಗೊಂಡು ಅಲ್ಲಿ ಕಟ್ಟಡ ಲಭ್ಯವಿರುವುದರಿಂದ ಅಲ್ಲಿ ಸರ್ಕಾರಿ ಐ.ಟಿ.ಐ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಬೈಲಹೊಂಗಲ ತಾಲ್ಲೂಕಿನ ನೇಸರ್ಗಿಯಲ್ಲಿ ಈಗಾಗಲೇ ಒಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಇರುವುದರಿಂದ ತಾಂತ್ರಿಕವಾಗಿ ಅದೇ ತಾಲ್ಲೂಕಿನಲ್ಲಿ ಮತ್ತೊಂದು ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸುವುದು ಸೂಕ್ತವಾಗಿರುವುದಿಲ್ಲ.

ಕಾರ್ಕಳದಲ್ಲಿ ಐ.ಟಿ.ಐ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ

3082 (353) : ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆಲವು ವರುಷಗಳ ಹಿಂದೆ ಕಾರ್ಕಳದಲ್ಲಿ ಒಂದು ಐ.ಟಿ.ಐ ಪ್ರಾರಂಭಿಸಲು ಸರ್ಕಾರಿ ಆದೇಶ ಹೊರಡಿಸಲಾಗಿದೆಯೇ; ಹಾಗಿದ್ದಲ್ಲಿ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗ್ರಾಮೀಣ ಪ್ರದೇಶವಾದ ಕಾರ್ಕಳ ತಾಲ್ಲೂಕಿನಲ್ಲಿ ಐ.ಟಿ.ಐ. ಕೇಂದ್ರ ಪ್ರಾರಂಭಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು):

ಅ) ಇಲ್ಲ

ಆ) ಇಲ್ಲ

ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ : ಮಾನ್ಯ ಅಧ್ಯಕ್ಷರೇ, ಕಳೆದ ಸಲವೂ ಸಹ ನಾನು ಇದೇ ಸದನದಲ್ಲಿ ಇದೇ ರೀತಿಯಾದ ಒಂದು ಪ್ರಶ್ನೆಯನ್ನು ಕೇಳಿದ್ದೆ. ಆ ಒಂದು ಸಂದರ್ಭದಲ್ಲೂ ಸಹ ಮಾನ್ಯ ಸಚಿವರು ಇದೇ ರೀತಿಯಾದ ಒಂದು ಉತ್ತರವನ್ನು ಕೊಟ್ಟಿದ್ದರು. ಸರ್ಕಾರದ ವತಿಯಿಂದ ಈ ವರ್ಷ ಎಷ್ಟು ಹೊಸ ಐ ಟಿ ಐ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೀರಿ ಎಂದು ನಾನು ಪ್ರಶ್ನೆ ಕೇಳಿದಾಗ ಇಲ್ಲ ಎಂದು ಉತ್ತರ ಕೊಟ್ಟಿದ್ದರು. ಆದರೆ ವರ್ಷದ ಕೊನೆಯಲ್ಲಿ ಎರಡು ಹೊಸ ಸರ್ಕಾರಿ ಐ ಟಿ ಐ ಕಾಲೇಜುಗಳನ್ನು ಮಂಜೂರು ಮಾಡಿದ್ದಾರೆ. ಆದ್ದರಿಂದ ನಾನು ಸರ್ಕಾರವನ್ನು ಈ ಒಂದು ಸಂದರ್ಭದಲ್ಲಿ ಕೇಳುವುದು ಇಷ್ಟೇ. ಈ ಬಾರಿ ಹೊಸ ಕಾಲೇಜು ಕೊಡುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೋ ಇಲ್ಲವೋ? ಸರ್ಕಾರ ಹೊಸ ಐ ಟಿ ಐ ಕಾಲೇಜು ಕೊಡುವಂತಾದ್ದು ಇದ್ದರೆ ನಮ್ಮ ಬೈಲಹೊಂಗಲ್ ತಾಲ್ಲೂಕಿನ ದೊಡವಾಡ ಗ್ರಾಮದಲ್ಲಿ, ಇದೊಂದು ವಿಶೇಷ ಪ್ರಕರಣ ಎಂದು ತೆಗೆದುಕೊಂಡು ಅಲ್ಲಿ ಒಂದು ಐ ಟಿ ಐ ಕಾಲೇಜು ಮಂಜೂರು ಮಾಡುತ್ತಾರೆಯೇ ಎಂದು ನಾನು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಒಟ್ಟು 104 ಸರ್ಕಾರೀ ಐ ಟಿ ಐ ಕಾಲೇಜುಗಳು ಇವೆ; 122 ಐ ಟಿ ಐ ಕಾಲೇಜುಗಳು ಅನುದಾನ ಪಡೆಯುವ ಕಾಲೇಜುಗಳು, ಮತ್ತು 500ಕ್ಕೂ ಹೆಚ್ಚು ಪ್ರೈವೇಟ್ ಐ ಟಿ ಐ ಇವೆ. ನಮ್ಮ ಸರ್ಕಾರದ ನೀತಿ ಎಲ್ಲಾ ತಾಲ್ಲೂಕುಗಳಲ್ಲಿ ಒಂದೊಂದು ಸರ್ಕಾರೀ ಐ ಟಿ ಐ ಇರಬೇಕು. ಆ ಪ್ರಕಾರ ಬೈಲಹೊಂಗಲ್ ತಾಲ್ಲೂಕಿನಲ್ಲಿ ಒಂದು ಐ ಟಿ ಐ ಇದೆ. ಮತ್ತೂ ಒಂದು ಐ ಟಿ ಐ ಬೇಕು ಎಂದು ತಾವು ಹೇಳುತ್ತಿದ್ದೀರಿ; ಆಯಿತು. ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಸರ್ಕಾರೀ ಐ ಟಿ ಐ ಇಲ್ಲ. ಈಗ ಸದ್ಯಕ್ಕೆ ಸೆಪರೇಟ್ ಬಜೆಟ್ ಹೊಸ ಐ ಟಿ ಐ ಶುರು ಮಾಡುವುದಕ್ಕೆ ಇಲ್ಲ. ಸರ್ಕಾರಕ್ಕೆ ಈಗ 18 ಪ್ರಸ್ತಾವನೆಗಳು ಬಂದಿವೆ. ಈ 18 ಪ್ರಸ್ತಾವನೆಗಳ ವಯಬಿಲಿಟಿ ನೋಡಿ ನಾನು ಸರ್ಕಾರಕ್ಕೆ ಬರೆದಿದ್ದೇನೆ. ಸೆಪರೇಟ್ ಬಜೆಟ್‌ಗೆ ಬರೆದಿದ್ದೇನೆ. ಆ ಬಜೆಟ್ ಬಂದರೆ ನಾನು ಖಂಡಿತವಾಗಿ ಅವರ ರಿಕ್ವೆಸ್ಟ್ ಅನ್ನು ಕನ್‌ಸಿಡರ್ ಮಾಡುತ್ತೇನೆ.